**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.49/2024**

ಫ್ರಾ.ಸಾ. 13

ಚಾ.ಸಾ. 7

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 29.11.2025**

| | |
|---|---|
| ಸಾಕ್ಷಿದಾರರ ಹೆಸರು | ಮಾಯೀಗೌಡ |
| ತಂದೆಯ ಹೆಸರು | ಸಣ್ಣೇಗೌಡ |
| ವಯಸ್ಸು | 40 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ದುಂಡನಹಳ್ಳಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

1. ಆರೋಪಿ 2 ಮತ್ತು 3 ಗೊತ್ತು. ಚಾಸಾ.1 ರಿಂದ 6 ಗೊತ್ತು. ನಾವೆಲ್ಲಾ ಒಂದೇ ಊರಿನವರು. ನ್ಯಾಯಾಲಯದ ಮುಂದೆ ಹಾಜರು ಇರುವ 2 ರಿಂದ 5 ನೇ ಆರೋಪಿಗಳು ಗೊತ್ತು. ರಮೇಶನ ಮಗ ನಿಖಿಲ್ 1 ನೇ ಆರೋಪಿ ಗೊತ್ತು, ನೋಡಿದರೆ ಗುರುತಿಸಬಲ್ಲೆ. ಈ ಪ್ರಕರಣದ ಬಗ್ಗೆ ಯಾವುದೇ ಘಟನೆ ನಾನು ನೋಡಿಲ್ಲ. ಪೊಲೀಸರು ಸಹಿ ಹಾಕಲು ಹೇಳಿದಾಗ ಹಾಕಿದ್ದೇನೆ. ಯಾವುದೋ ವಿಚಾರಕ್ಕೆ ಕೆಸ್ತೂರು ಠಾಣೆಗೆ ಹೋದಾಗ 2 ರಿಂದ 5 ನೇ ಆರೋಪಿಗಳು ಅಲ್ಲಿ ಇದ್ದರು. ಆಗ ಪೊಲೀಸರು ಇವರು ನಿಮ್ಮ ಊರಿನವರಾ ಎಂದು ಕೇಳಿದರು, ನಾನು ಹೌದು ಎಂದೆ. ಬಳಿಕ ಪೊಲೀಸರು ಒಂದು ಸಹಿ ಹಾಕಲು ಹೇಳಿದರು. ನಾನು ಸಹಿ ಹಾಕಿದೆ. ಅದರಲ್ಲಿ ಬರವಣಿಗೆ ಆಗಿತ್ತು. ಏನು ಬರವಣಿಗೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆ ದಾಖಲಿಸಿಕೊಂಡಿಲ್ಲ. ನನಗೆ ಈಗ ತೋರಿಸುತ್ತಿರುವ ಮು.ಮಾ.1 ಡ್ರ್ಯಾಗರ್ ಈ ಹಿಂದೆ ನಾನು ನೋಡಿಲ್ಲ. ಚಾಸಾ.2 ರಿಂದ

ಚಾಸಾ.4 ರವರಿಗೆ ಆರೋಪಿಗಳು ಮು.ಮಾ.1 ರಿಂದ ಹಲ್ಲೆ ಮಾಡಿದ್ದನ್ನು ನಾನು ನೋಡಿಲ್ಲ. ಇಷ್ಟನ್ನು ಹೊರತುಪಡಿಸಿ ಬೇರೆ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

2. ದಿನಾಂಕ *10.03.2023* ರಂದು ರಾತ್ರಿ ಸುಮಾರು *10.00* ಗಂಟೆ ಸಮಯದಲ್ಲಿ ಚಾಸಾ.*1* ಮತ್ತು ಚಾಸಾ.*2* ರವರು ನಮ್ಮ ಗ್ರಾಮದಲ್ಲಿ ಹಾದು ಹೋಗುವ ತುಮಕೂರು–ಮದ್ದೂರು ಮುಖ್ಯ ರಸ್ತೆಯ ಪಕ್ಕದಲ್ಲಿರುವ ಟೀ ಅಂಗಡಿ ಬಳಿ ಇದ್ದಾಗ ಪ್ರಕರಣದ *3* ಮತ್ತು *4* ನೇ ಆರೋಪಿಗಳು ಚಾಸಾ.*1* ಮತ್ತು ಚಾಸಾ.*2* ರವರ ಮೇಲೆ ಹಳೆಯ ದ್ವೇಷದಿಂದ ಗಲಾಟೆ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಬಳಿಕ ಚಾಸಾ.*1* ಮತ್ತು ಚಾಸಾ.*2* ಈ ವಿಚಾರವನ್ನು ಚಾಸಾ.*4* ರವರಲ್ಲಿ ಹೇಳಿದರು ಎಂಬ ವಿಚಾರ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಇದೇ ದ್ವೇಷದಿಂದ ದಿನಾಂಕ *11.03.2023* ರಂದು ಬೆಳಗ್ಗೆ *10.00* ಗಂಟೆ ಸಮಯದಲ್ಲಿ ಆರೋಪಿಗಳೆಲ್ಲಾ ಸೇರಿಕೊಂಡು ಚಾಸಾ.*1* ಮತ್ತು ಚಾಸಾ.*2* ರವರ ಮನೆಯ ಬಳಿ ಬಂದು ಅವರಿಗೆ ಅವ್ಯಾಚ ಪದಗಳಿಂದ ಬೈದರು, ಮನೆಯಿಂದ ಹೊರಗಡೆ ಬನ್ನಿ ಎಂದು ಕರೆದರು ಎಂದರೆ ನನಗೆ ಗೊತ್ತಿಲ್ಲ. ವಿಚಾರ ತಿಳಿದು ನಾನು, ಚಾಸಾ.*4*, ಚಾಸಾ.*5* ಮತ್ತು ಚಾಸಾ.*6* ರವರು ಚಾಸಾ.*1* ಮತ್ತು ಚಾಸಾ.*2* ರವರ ಮನೆಯ ಬಳಿ ಬಂದೆವು ಎಂದರೆ ನನಗೆ ಗೊತ್ತಿಲ್ಲ. ಆಗ ಚಾಸಾ.*1* ಮತ್ತು ಚಾಸಾ.*2* ರವರು ಮನೆಯ ಹೊರಗೆ ಬರದೇ ಇದ್ದಾಗ ಎಲ್ಲಾ ಆರೋಪಿಗಳು ಅವರ ಮನೆಯೊಳಗೆ ನುಗ್ಗಿ ಚಾಸಾ.*1* ಮತ್ತು ಚಾಸಾ.*2* ರವರನ್ನು ಮನೆಯ ಹೊರಗೆ ಎಳೆದು ತಂದು ಕೈಗಳಿಂದ ಹೊಡೆದು, ಕಾಲುಗಳಿಂದ ತುಳಿದು ನೋವುಂಟು ಮಾಡಿದರು ಎಂದರೆ ನಾನು ನೋಡಿಲ್ಲ.

3. 1ನೇ ಆರೋಪಿ ತನ್ನ ಪ್ಯಾಂಟು ಜೇಬಿನಿಂದ ಒಂದು ಡ್ರ್ಯಾಗರ್ ತೆಗೆದು ಚಾಸಾ.2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಡ್ರ್ಯಾಗರ್ ನಿಂದ ಚಾಸಾ.2 ರವರ ಎದೆಗೆ ಚುಚ್ಚಲು ಪ್ರಯತ್ನಿಸಿದಾಗ ಚಾಸಾ.2 ತಪ್ಪಿಸಿಕೊಂಡ, ಆಗ ಏಟು ಚಾಸಾ.2 ರವರ ಎಡಭುಜಕ್ಕೆ ತಾಗಿ ರಕ್ತ ಗಾಯವಾಯಿತು ಎಂದರೆ ನನಗೆ ಗೊತ್ತಿಲ್ಲ. ಆಗ ಚಾಸಾ.3 ಮತ್ತು ಚಾಸಾ.4 ಗಲಾಟೆ ಬಿಡಿಸಲು ಹೋದರು, ಆಗ 1ನೇ ಆರೋಪಿ ತನ್ನ ಕೈಯಲ್ಲಿದ್ದ ಡ್ರ್ಯಾಗರ್ ನಿಂದ ಚಾಸಾ.4 ರವರ ಬಲಮುಂಗೈಗೆ ಚುಚ್ಚಿ ರಕ್ತ ಗಾಯ ಮಾಡಿದ ಅದೇ ರೀತಿ ಚಾಸಾ.3 ರವರಿಗೆ 1ನೇ ಆರೋಪಿ ಡ್ರ್ಯಾಗರ್ ನಿಂದ ಹೊಟ್ಟೆಯ ಎಡಭಾಗಕ್ಕೆ ಚುಚ್ಚಿ ರಕ್ತಗಾಯ ಮಾಡಿದ ಎಂದರೆ ನನಗೆ ಗೊತ್ತಿಲ್ಲ. ಆಗ ಆರೋಪಿ 2 ಮತ್ತು 3 ರವರು ಚಾಸಾ.3 ರವರಿಗೆ ಕೈಗಳಿಂದ ಹೊಡೆದು ನೋವುಂಟು ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ಅದೇ ಸಮಯಕ್ಕೆ 5ನೇ ಆರೋಪಿ ಮತ್ತು ಭರತ್ ಚಾಸಾ.4 ರವರಿಗೆ ಕೈಗಳಿಂದ ಮೈಕೈಗೆ ಹೊಡೆದು ನೋವುಂಟು ಮಾಡಿದರು ಎಂದರೆ ಸರಿಯಲ್ಲ. ಆಗ ನಾನು, ಚಾಸಾ.5 ಮತ್ತು ಚಾಸಾ.6 ರವರು ಗಲಾಟೆ ಬಿಡಿಸಿದೆವು ಎಂದರೆ ಸರಿಯಲ್ಲ. ಆಗ ಆರೋಪಿಗಳೆಲ್ಲರೂ ಚಾಸಾ.1 ರಿಂದ ಚಾಸಾ.4 ರವರಿಗೆ ಕೊಲೆ ಬೆದರಿಕೆ ಹಾಕಿ ಅಲ್ಲಿಂದ ಹೋದರು ಎಂದರೆ ನನಗೆ ಗೊತ್ತಿಲ್ಲ. ಹೋಗುವಾಗ ಮು.ಮಾ.1 ಡ್ರ್ಯಾಗರ್ ಅನ್ನು ಅಲ್ಲಿಯೇ ಬಿಸಾಡಿ ಹೋದರು ಎಂದರೆ ಸರಿಯಲ್ಲ. ಚಾಸಾ.1 ರವರು ಮು.ಮಾ.1 ಡ್ರ್ಯಾಗರ್ ಮತ್ತು ಗಾಯಾಳುಗಳಾದ ಚಾಸಾ.2 ಮತ್ತು ಚಾಸಾ.3 ರವರ ರಕ್ತವಾಗಿದ್ದ ಬಟ್ಟೆಗಳನ್ನು ಎತ್ತಿಟ್ಟು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಗೊತ್ತಿಲ್ಲ.

4. ನಂತರ ಈ ಬಾಬ್ತು ಚಾಸಾ.1 ರವರು ಪೊಲೀಸರಿಗೆ ಆರೋಪಿತರ ವಿರುದ್ಧ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಬಳಿಕ ಪೊಲೀಸರು ನನ್ನನು ದಿನಾಂಕ 12.03.2023 ರಂದು ವಿಚಾರಣೆ ಮಾಡಿ ನನ್ನ ಹೇಳಿಕೆ ದಾಖಲಿಸಿಕೊಂಡರು ಎಂದರೆ ಸರಿಯಲ್ಲ. ನಾನು ನನ್ನ ಹೇಳಿಕೆಯಲ್ಲಿ ಮೇಲೆ ಹೇಳಿದಂತೆ ಆರೋಪಿಗಳು ಚಾಸಾ.2 ರಿಂದ ಚಾಸಾ.4 ರವರಿಗೆ ಹಲ್ಲೆ ಮಾಡಿದ್ದಾರೆಂದು ಹೇಳಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ದಿನಾಂಕ 12.03.2023 ರ ಹೇಳಿಕೆಯ ಸಂಪೂರ್ಣ ಅಂಶಗಳನ್ನು ನಿರಾಕರಿಸಿದ ಕಾರಣ ಸದರಿ ಹೇಳಿಕೆಯನ್ನು ನಿಪಿ.24 ಎಂದು ಗುರುತಿಸಲಾಯಿತು.

5. ನಾನು ಹೇಳಿಕೆ ನೀಡಿ ಹಲ್ಲೆ ಬಗ್ಗೆ ಪೊಲೀಸರಿಗೆ ಹೇಳಿದ್ದರೂ ಹಲ್ಲೆಯನ್ನು ಕಣ್ಣಾರೆ ಕಂಡಿದ್ದರೂ ನೋಡಿಲ್ಲವೆಂದು ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗಳು ಮತ್ತು ಗಾಯಾಳುಗಳು ಚಾಸಾ.1 ರಿಂದ ಚಾಸಾ.4 ರವರು ಪರಸ್ಪರ

ರಾಜೀ ಮಾಡಿಕೊಂಡಿದ್ದೇವೆಂದು ಹೇಳಿದ್ದರಿಂದ ನಾನು ಘಟನೆ ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ *2* ರಿಂದ *5* ನೇ ಆರೋಪಿಗಳ ಪರ ಶ್ರೀ ಎಸ್ ಪಿ ಎಸ್ ವಕೀಲರಿಂದಃ**

1. ನಾನು ಠಾಣೆಗೆ ಹೋದಾಗ ನ್ಯಾಯಾಲಯದ ಮುಂದಿರುವ ಆರೋಪಿಗಳು ಇರಲಿಲ್ಲ ಎಂದರೆ ಸರಿ. ನಾನು ಠಾಣೆಯಲ್ಲಿ ಸಹಿ ಹಾಕಿದ ದಾಖಲೆಯಲ್ಲಿ ಏನು ಬರೆದಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.